

ಡಾ.ವಿನೋದ ಛೆಬ್ಬಿ

**ತಾಯ್ತಂದೆಯರ ದಾಂಪತ್ಯದ ಮಾದರಿಯು ಮಕ್ಕಳ ದಾಂಪತ್ಯದ ಮಾದರಿಯ ಮೇಲೆ ಪ್ರಭಾವ ಬೀರುತ್ತದೆಯೆ?**

# 82: ಹೀನೈಕೆ – ತೇಜೋವಧೆ

ಮರುವಾರ ಲೋಚನ್ ಲೂಸಿ ಇಬ್ಬರೂ ನನ್ನನ್ನು ಕಾಣಲು ಬಂದರು. ಲೋಚನ್ ತನ್ನ ಕತೆ ಹೇಳಿಕೊಂಡ. ಲೂಸಿಯನ್ನು ತುಂಬಾ ಇಷ್ಟಪಟ್ಟು ಮದುವೆಯಾಗಿದ್ದಾನೆ. ಅವಳ ದಿಟ್ಟತನ, ನಿರ್ಧಾರಶಕ್ತಿ, ಆತ್ಮವಿಶ್ವಾಸದ ನಡೆನುಡಿಗಳು ಅವನನ್ನು ಸೆಳೆದಿವೆ. ಆಕೆಯು ತನ್ನನ್ನು ತುಂಬಾ ಪ್ರೀತಿಸುತ್ತಿರುವುದು ಅವನಿಗೆ ಗೊತ್ತು. ಅವಳೊಡನೆ ಮೈಮರೆತು ಇರುವ ಕ್ಷಣಗಳು ರೋಚಕವಾಗಿರುತ್ತದೆ. ಇವನ ದೋಷಗಳನ್ನು ಬೆರಳೆತ್ತಿ ತೋರಿಸುವಾಗ ಆಕೆ ಹೇಳುವುದು ಸರಿ, ತನ್ನದು ತಪ್ಪಿದೆ ಎನ್ನಿಸುತ್ತದೆ. ಆದರೆ ಲೂಸಿ ವ್ಯವಹಾರದ ಮಾತಾಡುವಾಗ ಲೋಚನನ ಎದೆಯೊಳಗೆ ಬಿಗಿದಂಥ ಅನುಭವ ಆಗುತ್ತದೆ. ವಿರೋಧಭಾವ ಹುಟ್ಟುತ್ತದೆ.

ನನಗೆ ಕುತೂಹಲವಾಯಿತು. ತಪ್ಪೆನಿಸಿದರೆ ತಪ್ಪಿತಸ್ಥ ಭಾವ ಹುಟ್ಟಬೇಕು. ವಿರೋಧಭಾವ ಯಾಕೆ? ನಾನು ಕೇಳಿದೆ: 'ನಿಮ್ಮ ಎದೆಯೊಳಗೆ ಬಿಗಿದಂಥ ಅನುಭವ ಆಗುತ್ತದಲ್ಲವೆ? ಆಗ ನಿಮ್ಮೊಳಗೆ ಏನು ಭಾವನೆ ಮೂಡಿರುತ್ತದೆ?' ಲೋಚನ್ ಯೋಚಿಸಿ ಹೇಳಿದ. 'ನಾನು ಅವಹೇಳನಕ್ಕೆ ಒಳಗಾಗುತ್ತಿದ್ದೇನೆ, ಅವಮಾನ ಆಗಿ ಕುಗ್ಗಿ ಸಣ್ಣವನಾಗುತ್ತಿದ್ದೇನೆ ಎನ್ನಿಸುತ್ತದೆ.' ಅದಕ್ಕವನು ಕೊಟ್ಟ ವಿವರ ವಿಸ್ಮಯಕರವಾಗಿತ್ತು.

ಲೋಚನನ ಕಾಲಹರಣದ ಬಗೆಗೆ ಲೂಸಿಗೆ ಸಿಟ್ಟು ಬರುವುದು ಸಹಜವಷ್ಟೆ? ಆಗ ಆಕೆ, 'ಹೀಗೆ ವರ್ತಿಸುವುದು ನನಗೆ ಕೋಪ ತರಿಸುತ್ತದೆ' ಎನ್ನುವುದಷ್ಟೇ ಅಲ್ಲ, 'ನಿನ್ನ ಬಗೆಗೆ ನನಗೆ ಅಸಹ್ಯ ಬರುತ್ತದೆ, ನೀನು ಮನುಷ್ಯನೇ ಸರಿಯಾಗಿಲ್ಲ!' ಎನ್ನುತ್ತಾಳೆ. ಅಂದರೆ, 'ನಿನ್ನ ಕಾರ್ಯನೀತಿ ಸರಿಯಾಗಿಲ್ಲ' ಎಂದು ಅವನ ವರ್ತನೆಯನ್ನು ಟೀಕಿಸುವ ಭರದಲ್ಲಿ, 'ನೀನೇ ಸರಿಯಾಗಿಲ್ಲ' ಎಂದು ಅವನ ವ್ಯಕ್ತಿತ್ವವನ್ನೇ ಅವಹೇಳನ **(shaming)** ಮಾಡುವ ಸಂದೇಶ ಕೊಡುತ್ತಿದ್ದಾಳೆ. ಇದರರ್ಥ ಏನು? ಲೋಚನನ ತಣ್ಣಗಿನ ಅಸಹಕಾರವು ಲೂಸಿಯು ತನ್ನಮೇಲೆ ಹೇರುವ ಕೆಲಸಕಾರ್ಯಗಳ ವಿರುದ್ಧ ಅಥವಾ ತನ್ನ ಮೈಗಳ್ಳತನದ ಬಗೆಗೆ ಆಕೆಯ ಟೀಕೆಗಳ ವಿರುದ್ಧ ಅಲ್ಲ; ಬದಲಾಗಿ ತನ್ನ ವ್ಯಕ್ತಿತ್ವವನ್ನೇ ಹೀಗಳೆಯುವುದರ ವಿರುದ್ಧ ಇದೆ. ಅವಹೇಳನವು ಸಂತತ ತೇಜೋವಧೆ ಮಾಡುವಾಗ (ಅಪ್ಪನೊಡನೆ ಮಾಡಿದಂತೆ) ಆತ್ಮರಕ್ಷಣೆಯ ಹೋರಾಟದ ಪ್ರಕ್ರಿಯೆಯಲ್ಲಿ ತೊಡಗುತ್ತ ಗುಮ್ಮನಗುಸಕ ಎನ್ನಿಸಿಕೊಳ್ಳುತ್ತಿದ್ದಾನೆ!

ಇಲ್ಲೊಂದು ಪ್ರಶ್ನೆ ನನ್ನ ತಲೆ ತಿನ್ನತೊಡಗಿತು: ಲೋಚನನ ಕಾಲಹರಣ, ಕೆಲಸಗಳ್ಳತನಕ್ಕೆ ಪ್ರತಿಯಾಗಿ ಲೂಸಿಯು ಅವನನ್ನು ಆಕ್ಷೇಪಿಸಬಹುದು, ಟೀಕಿಸಬಹುದು, ಜಗಳವಾಡಬಹುದು. ಅದೆಲ್ಲ ಸಹಜ. ಆದರೆ ಈ ಅವಹೇಳನ– ಅದೂ ತಾನು ಮೈಮರೆತು ಪ್ರೀತಿಸುವ ವ್ಯಕ್ತಿಯ ಬಗೆಗೆ – ಎಲ್ಲಿಂದ ಬಂತು? ಉತ್ತರ ಲೂಸಿಯ ಕುಟುಂಬದ ಇತಿಹಾಸದೊಳಗೆ ಅಡಗಿತ್ತು.

ಲೂಸಿಯ ತಂದೆ ತಾಯಿ ಆಕೆಯನ್ನು ತುಂಬ ಪ್ರೀತಿಸುತ್ತ ಮುದ್ದಾಗಿ ಬೆಳೆಸಿದ್ದಾರೆ. ಅವರಿಂದ ಲೂಸಿ ಭದ್ರಭಾವದ ನಂಟನ್ನು **(secure attachment style)** ಹೊಂದಿದ್ದಾಳೆ. ಆತ್ಮವಿಶ್ವಾಸದ ಜೊತೆಗೆ ಸ್ವಲ್ಪ ಅಹಂಭಾವವನ್ನೂ ಬೆಳೆಸಿಕೊಂಡಿದ್ದು, ಯಾವುದೇ ಸನ್ನಿವೇಶದಲ್ಲಿ ತಾನೇ ಮುಖ್ಯವೆನ್ನುವಂತೆ ಇರುತ್ತಾಳೆ. ಲೂಸಿಯ ತಂದೆ ಭದ್ರಭಾವ ಹೊಂದಿದ್ದರೂ ಆತನ ತಾಯಿಯು ತನ್ನ ಕನಸುಗಳನ್ನು (ಲೋಚನನ ತಂದೆಯಂತೆ) ಮಗನ ಮೇಲೆ ಹೇರಿ ಅವುಗಳನ್ನು ನನಸು ಮಾಡಲೇಬೇಕೆಂದು ಒತ್ತಾಯಿಸಿದ್ದಳು. ಆತ ತನ್ನ ಅಸ್ಮಿತೆಯನ್ನು **(identity)** ಉಳಿಸಿಕೊಳ್ಳಬೇಕಾದರೆ ಅಮ್ಮನ ವಿರುದ್ಧ ದಂಗೆಯೇಳಬೇಕಾಯಿತು. ಪರಿಣಾಮವಾಗಿ ಸ್ವಯಂಪ್ರೇರಿತ ನಿರ್ಧಾರಗಳನ್ನು ಮೂಲೆಗೊತ್ತುತ್ತ ಗುಮ್ಮನಗುಸಕ ಗುಣ ಬೆಳೆಸಿಕೊಂಡ. ಇತ್ತ, ಲೂಸಿಯ ತಾಯಿಯ ತಾಯ್ತಂದೆಯರು ತಮ್ಮ ಮಗನಿಗೆ ಪ್ರಾತಿನಿಧ್ಯ ನೀಡುತ್ತ ಮಗಳನ್ನು ನಿರ್ಲಕ್ಷ್ಯ, ಅವಹೇಳನಕ್ಕೆ ಗುರಿಮಾಡಿದ್ದರಿಂದ ಆಕೆ ಕ್ಷೋಭಾಭಾವದ ನಂಟನ್ನು **(disorganized attachment style)** ಬೆಳೆಸಿಕೊಂಡಳು. ಅಲ್ಲಾಡುವ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸಲು ಹೆಣಗುತ್ತ, ಅದಕ್ಕಾಗಿ ವಯಸ್ಸಿಗೆ ಮೀರಿದ ಕೆಲಸಕಾರ್ಯಗಳಲ್ಲಿ ತೊಡಗಬೇಕಾಯಿತು (ಉದಾ. ತನ್ನ ಶಿಕ್ಷಣದ ವೆಚ್ಚ ಭರಿಸಲು ಮಕ್ಕಳಿಗೆ ಪಾಠ ಹೇಳಿದ್ದು). ಪರಿಣಾಮವಾಗಿ ಸದಾ ಚಟುವಟಿಕೆಯ ವರ್ತನೆಯಿಂದ ತನ್ನನ್ನು ಗುರುತಿಸಿಕೊಂಡಳು. ಮದುವೆಯ ನಂತರ ಗುಮ್ಮನಗುಸಕ ಗಂಡನನ್ನು ನಿಭಾಯಿಸುವುದು ಕಷ್ಟವಾದಾಗ ಅವಹೇಳನದ ಅಸ್ತ್ರ ಉಪಯೋಗಿಸಿದಳು. ಯಾಕೆ? ಅವಹೇಳನವು ಒಂದು ವ್ಯಕ್ತಿಯನ್ನು ಹೇಗೆ ಬಡಿದೆಬ್ಬಿಸುತ್ತದೆ ಎಂಬ ಯಾತನಾಭರಿತ ಅನುಭವ ಆಕೆಗಿತ್ತು. ತನ್ನ ತಾಯಿಯು ಗುಮ್ಮನಗುಸಕ ತಂದೆಯನ್ನು ಅವಹೇಳನದ ಮೂಲಕ ನಿಭಾಯಿಸುವುದನ್ನು ಗಮನಿಸಿದ ಲೂಸಿ ಅದನ್ನೇ ತನ್ನ ದಾಂಪತ್ಯದಲ್ಲಿ ಅಳವಡಿಸಿಕೊಳ್ಳಲು ಭಾವನಾತ್ಮಕ ನಿರ್ಧಾರ ಮಾಡಿದ್ದಾಳೆ. ಹಾಗಾಗಿಯೇ ಲೋಚನ ತನ್ನನ್ನು ಅಲಕ್ಷಿಸಿದಾಗಲೆಲ್ಲ ಲೂಸಿ ಅವನನ್ನು ಹೀನೈಸುವುದು! ಆದರೆ ಹೀನೈಕೆಯು ಲೋಚನನಿಗೆ ಎಷ್ಟೊಂದು ಯಾತನೆ ಕೊಡುತ್ತದೆಂಬುದು ಅವಳ ಕಲ್ಪನೆಗೂ ಮೀರಿದ್ದು – ಯಾಕೆಂದರೆ ಆಕೆ ಯಾವೊತ್ತೂ ಅವಹೇಳನಕ್ಕೆ ಒಳಗಾಗಿದ್ದೇ ಇಲ್ಲ. ಅವಳದೇನಿದ್ದರೂ ಅಮ್ಮನನ್ನು ನೋಡಿ ತಿಳಿದದ್ದಷ್ಟೆ.

ಇಲ್ಲೊಂದು ಪ್ರಶ್ನೆ: ತಂದೆಯ ಗುಮ್ಮನಗುಸಕತನ ದಾಂಪತ್ಯಕ್ಕೆ ಮಾರಕ ಎಂದು ಗೊತ್ತಿದ್ದರೂ ಲೂಸಿ ಗುಮ್ಮನಗುಸಕನನ್ನೇ ಸಂಗಾತಿಯನ್ನಾಗಿ ಆರಿಸಿಕೊಂಡದ್ದೇಕೆ? ಇದಕ್ಕೆ ಲೂಸಿಯ ಸುಪ್ತಮನದಲ್ಲಿರುವ ಕಾರಣಗಳು ನಂತರದ ಮಾತುಕತೆಯಲ್ಲಿ ಹೊರಬಂದುವು. ಒಂದು: ಲೂಸಿಯು ತಂದೆಯನ್ನು ಪ್ರೀತಿಸುತ್ತಿದ್ದರೂ ಅವನ ಸ್ವಭಾವದಿಂದ ತಾಯಿಯು ತೊಂದರೆಗೆ ಒಳಗಾಗಿದ್ದನ್ನು ತೋರಿಸಿ ಖಂಡಿಸುವ ಬಯಕೆಯಿತ್ತು. ಹಾಗೆಂದು ತಂದೆಯನ್ನು ಎದುರುಹಾಕಿಕೊಳ್ಳಲು ಧೈರ್ಯ ಸಾಲದು. ಅದೇ ತಂದೆಯ ಗುಣವನ್ನು ಹೊಂದಿರುವ ಗಂಡನನ್ನು ಆರಾಮವಾಗಿ ಎದುರಿಸಬಹುದಲ್ಲ? ಎರಡು: ದಾಂಪತ್ಯದಲ್ಲಿ ಸಂಗಾತಿಯ ಜೊತೆಗೆ ಹುಟ್ಟುವ ಸಮಸ್ಯೆಗಳನ್ನು, ಅವುಗಳನ್ನು ನಿಭಾಯಿಸುವ ಕೌಶಲ್ಯಗಳನ್ನು ಅರಿತಿರುವುದು ಮುಖ್ಯವಷ್ಟೆ? ಗುಮ್ಮನಗುಸಕ ಗಂಡಸರು ಹೇಗಿರುತ್ತಾರೆ, ಹಾಗೂ ಅಂಥವರನ್ನು ಹೇಗೆ ನಿಭಾಯಿಸುವುದು ಎಂಬುದನ್ನು ಅರಿತಿದ್ದಾಳೆ; ಅಷ್ಟೇ ಅಲ್ಲ, ನಿಭಾಯಿಸುವುದಕ್ಕೆ ಅಗತ್ಯವಾದ ಹೀನೈಕೆಯ ಅಸ್ತ್ರದ ಉಪಯೋಗವನ್ನೂ (ಅಮ್ಮನ ಮಾದರಿಯಿಂದ ತಪ್ಪಾಗಿ) ಕಲಿತಿದ್ದಾಳೆ! (ಇದರಲ್ಲಿ ಆಕೆಯ ಅಹಂಭಾವದ ಕೈವಾಡವೂ ಇದೆ.) ಅಂದರೆ ಅವಳ ಆಯ್ಕೆಯೇ ಅವಳಿಗೆ ಮುಳುವಾಗಿದೆ! ಇತ್ತ ಲೋಚನ ಆತ್ಮವಿಶ್ವಾಸದ ಕೊರತೆಯನ್ನು ತುಂಬಿಕೊಳ್ಳಲು ಹೆಚ್ಚು ಆತ್ಮವಿಶ್ವಾಸ ಹೊಂದಿರುವ ಲೂಸಿಯನ್ನು ಆರಿಸಿಕೊಂಡಿದ್ದಾನೆ. ಲೂಸಿಯ ಹೆಚ್ಚಿದ ಆತ್ಮವಿಶ್ವಾಸವೇ ಅವಹೇಳನದ ರೂಪದಲ್ಲಿ ಅವನನ್ನು ಚುಚ್ಚುತ್ತಿದೆ. ಜಾನ್ ಗಾಟ್ಮನ್ ಸರಿಯಾಗಿ ಹೇಳಿದ್ದಾನೆ: ಸಂಗಾತಿಯನ್ನು ಆರಿಸಿಕೊಳ್ಳುವಾಗ ಸಮಸ್ಯೆಗಳನ್ನೂ ಆರಿಸಿಕೊಳ್ಳುತ್ತೇವೆ!

ಹೀಗೆ, ನಾವೆಲ್ಲ ನಮ್ಮ ಸಂಗಾತಿಯನ್ನು ಹೇಗೆ ನಡೆಸಿಕೊಳ್ಳುತ್ತೇವೆ ಎನ್ನುವುದು ಬಹುತೇಕ ನಮ್ಮ ಹಿರಿಯರ ಮಾದರಿಯ ಮೇಲೆ ಅವಲಂಬಿಸಿರುತ್ತದೆ. "ದಾಂಪತ್ಯದ ಘರ್ಷಣೆಗಳಿಗೆ ಕಾರಣ ಸಂಗಾತಿಗಳ ಅಸಮರ್ಥ ತಾಯ್ತಂದೆಯರು" ಎಂದು ಹಾರ್ವಿಲ್ ಹೆಂಡ್ರಿಕ್ಸ್ ಹೇಳುವುದು ಎಷ್ಟೊಂದು ನಿಜ!

ಲೋಚನ್ ಲೂಸಿಯ ದಾಂಪತ್ಯದ ಬಗೆಗೆ ಇನ್ನೂ ಏನೇನು ಅರ್ಥಮಾಡಿಕೊಂಡೆ ಎನ್ನುವುದನ್ನು ಮುಂದಿನ ವಾರ ಹೇಳುತ್ತೇನೆ.

**ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.**
**ಲೈಂಗಿಕ ಸಮಸ್ಯೆಗಳಿಗೆ: 8050255229 (ಮಧ್ಯಾಹ್ನ 2ರಿಂದ 4ರ ತನಕ);**
**ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)**
**ಲೇಖಕರ ವಿಳಾಸ: www.medisex.org**